ಕರ್ನಾಟಕ ವಿಧಾನ ಸಭೆ ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ DATE: 16/6/2020

ಇದು ಸೈಬರ್ ಕ್ರಿಮಿನಲ್‌ಗಳ ಹೊಸ ಬಗೆಯ ವಂಚನೆ, ಹುಷಾರು!

# ಫೇಸ್‌ಬುಕ್ ಮೆಸೆಂಜರ್‌ನಲ್ಲಿ ಫ್ರೆಂಡ್ ಹಣ ಕೇಳಿದ್ರಾ?

**ಬೆಂಗಳೂರು:** ಫೇಸ್‌ಬುಕ್ ಮೆಸೆಂಜರ್‌ನಲ್ಲಿ ನಿಮ್ಮ ಗೆಳೆಯರು ಮೊದಲಿಗೆ 'ಹಾಯ್' ಎಂದು ಮಾತು ಆರಂಭಿಸಬಹುದು. ಚಾಟಿಂಗ್ ಮುಂದುವರಿಸಿ ಕೊನೆಗೆ, ಎಂಥದ್ದೋ ನಂಬುವಂಥ ಕಾರಣ ಮುಂದಿಟ್ಟು 'ದಯವಿಟ್ಟು 35,000 ರೂ. ಕೊಡಿ' ಎಂದು ವಿನಂತಿ ಮಾಡಿಕೊಳ್ಳಬಹುದು. ಹೀಗೆ ಹಣ ಕೇಳುವ ವ್ಯಕ್ತಿ ನಿಮ್ಮ ಗೆಳೆಯನಲ್ಲ! ಇದು ಫೇಸ್‌ಬುಕ್ ಮೆಸೆಂಜರ್‌ನಲ್ಲಿ ಆರಂಭಗೊಂಡಿರುವ ಹೊಸ ರೀತಿಯ ವಂಚನೆ.

ವಿಕ CYBER ಅಲರ್ಟ್

ನಿಮ್ಮ ಗೆಳೆಯರ ಫೇಸ್‌ಬುಕ್ ಖಾತೆ ಹ್ಯಾಕ್ ಮಾಡಿ, ಇಲ್ಲವೇ ನಿಮ್ಮ ಫ್ರೆಂಡ್ ಲಿಸ್ಟ್‌ನಲ್ಲಿರುವ ವ್ಯಕ್ತಿಗಳ ಹೆಸರಲ್ಲಿ ಹೊಸ ಖಾತೆಯನ್ನು ಸೈಬರ್ ಕ್ರಿಮಿನಲ್‌ಗಳು ಸೃಷ್ಟಿಸುತ್ತಾರೆ. ನಿಮ್ಮ ಹೆಸರಿನ ನಕಲಿ ಖಾತೆಯ ಮೂಲಕ ಮೊದಲಿಗೆ ಹೊಸಬರಿಗೆ ಫ್ರೆಂಡ್ ರಿಕ್ವೆಸ್ಟ್ ಕಳಿಸುತ್ತಾರೆ. ಅವರು ಓಕೆ ಮಾಡಿದ ತಕ್ಷಣ, ಹಣ ಕೇಳುವ ಆಟ ಆರಂಭಿಸುತ್ತಾರೆ. ಇನ್ನು, ಹಾಲಿ ಫ್ರೆಂಡ್ಸ್ ಲಿಸ್ಟ್‌ನಲ್ಲಿರುವವರ ಬಳಿ ಚಾಟಿಂಗ್ ಆರಂಭಿಸಿ ಹಣಕ್ಕಾಗಿ ಕೋರಿಕೆ ಸಲ್ಲಿಸುತ್ತಾರೆ. ಸ್ವಲ್ಪ ಯಾಮಾರಿದರೂ ನೀವು ಹಣ ಕಳೆದುಕೊಳ್ಳುವುದು ಗ್ಯಾರಂಟಿ.

ಇಂಥದ್ದೊಂದು ಹೊಸ ರೀತಿಯ ವಂಚನೆ ಮಾರ್ಗವನ್ನು ಸೈಬರ್ ಕ್ರಿಮಿನಲ್‌ಗಳು ಕಂಡುಕೊಂಡಿದ್ದಾರೆ. ಬೆಂಗಳೂರು ಸೇರಿದಂತೆ ನಾನಾ ಕಡೆ ಇಂಥ ಪ್ರಕರಣಗಳು ಕಂಡು ಬಂದಿವೆ. ಕೆಲವರು ಸೈಬರ್ ಠಾಣೆಗೆ ದೂರು ನೀಡುವುದಾಗಿ ಹೇಳಿದ್ದಾರೆ. ''ನಾವು ಯಾರಿಗೂ ಹಣಕ್ಕಾಗಿ ಮನವಿ ಸಲ್ಲಿಸಿಲ್ಲ. ನಮ್ಮ ಹೆಸರಲ್ಲಿ ಇಂಥ ಮನವಿಗಳು ಬಂದರೆ ನಿರ್ಲಕ್ಷ್ಯ ಮಾಡಿ'' ಎಂಬುದಾಗಿ ಅನೇಕರು ಫೇಸ್‌ಬುಕ್‌ನಲ್ಲಿ ತಮ್ಮ ಗೆಳೆಯರಿಗೆ ವಿವರಣೆ ನೀಡುತ್ತಿದ್ದಾರೆ.

## ಏನ್ ಮಾಡಬೇಕು?

- ಫೇಸ್‌ಬುಕ್ ಮೆಸೆಂಜರ್, ಇ-ಮೇಲ್ ಅಥವಾ ವಾಟ್ಸ್ಆ್ಯಪ್‌ನಲ್ಲಿ ನಿಮ್ಮ ಪರಿಚಿತರ ಹೆಸರಲ್ಲಿ ಬರುವ ಹಣ ಕೋರಿಕೆಯ ಮನವಿಗಳನ್ನು ನಿರ್ಲಕ್ಷ್ಯ ಮಾಡಿ. ಡಿಲೀಟ್ ಮಾಡಿ. ಬೇಕಿದ್ದರೆ ಫೋನ್ ಮಾಡಿ ವಿಚಾರಿಸಿ.
- ಅಪರಿಚಿತರು ಕಳಿಸುವ ಯಾವುದೇ ಲಿಂಕ್ ಅನ್ನು ಕ್ಲಿಕ್ ಮಾಡಬೇಡಿ.
- ನಿಮ್ಮ ಹೆಸರಲ್ಲಿ ಯಾರಿಗಾದರೂ ಇಂಥ ಮೆಸೇಜ್‌ಗಳು ಹೋಗುತ್ತಿದ್ದರೇ, ಅದು ನಿಮ್ಮ ಗಮನಕ್ಕೆ ಬಂದರೆ ಪೊಲೀಸರಿಗೆ ದೂರು ನೀಡಿ.